ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1501(1728)

2) ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 23-03-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಅಗರ ಕೆರೆಯನ್ನು ಪುನರುಜ್ಜೀವನಗೊಳಿಸಲು ಖರ್ಚಾದ ವೆಚ್ಚವೆಷ್ಟು; ಈ ಮೊತ್ತವನ್ನು ಭರಿಸಿದವರು ಯಾರು; ಈ ಯೋಜನೆಯಲ್ಲಿ ಖಾಸಗಿ ಸಂಸ್ಥೆಗಳ ಪಾತ್ರವೇನು; ಅಗರ ಕೆರೆಯು ಯಾರ ಸುಪರ್ದಿಯಲ್ಲಿದೆ;	ಅಗರ ಕೆರೆಯನ್ನು ದಿನಾಂಕ:01.07.2018ರಿಂದ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವಶದಿಂದ ಬೆಂಗಳೂರು ನಗರ ವಿಭಾಗವು ಪಡೆದಿದ್ದು, ದಿನಾಂಕ:19.02.2020 ರಂದು ಬಿಬಿಎಂಪಿ ವಶಕ್ಕೆ ಹಸ್ತಾಂತರಿಸಲಾಗಿದೆ. ಬೆಂಗಳೂರು ನಗರವಿಭಾಗದ ವಶದಲ್ಲಿದ್ದ ಅವಧಿಯಲ್ಲಿ ರೂ.32.64180ಲಕ್ಷಗಳ ವೆಚ್ಚದಲ್ಲಿ ಪುನರುಜ್ಜೀವನಗೊಳಿಸಿ ನಿರ್ವಹಣೆ ಮಾಡಲಾಗಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುಪರ್ದಿಯಲ್ಲಿರುತ್ತದೆ.
ಆ)	ಅಗರ ಕೆರೆಯನ್ನು ರಕ್ಷಣೆ ಮತ್ತು ನಿರ್ವಹಣೆ ಹೆಸರಿನಲ್ಲಿ ಖಾಸಗಿಯವರಿಗೆ ವಹಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಖಾಸಗಿ ಸಂಸ್ಥೆಯವರೊಡನೆ ಸರ್ಕಾರ ಯಾವರೀತಿಯ ಒಪ್ಪಂದ ಮಾಡಿಕೊಂಡಿದೆ.	ಅಗರ ಕೆರೆಯನ್ನು ಮೆ॥ ಬಯೋಟ ನ್ಯಾಚುರಲ್ ಸಿಸ್ಟಂ ಪ್ರೈ. ಲಿ., ಬೆಂಗಳೂರು ಇವರೊಂದಿಗೆ ದಿನಾಂಕ:10.04.2007ರ ಕರಾರಿನ ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರೆ, ಈ ಮುಂಚೆ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿದ್ದು, ಸದರಿ ಪ್ರಾಧಿಕಾರವು ನಿರಸನಗೊಂಡಿದ್ದರಿಂದ, ಪಿ.ಪಿ.ಪಿ. ಮಾದರಿಯಡಿ ನಿರ್ವಹಣೆಗಾಗಿ ದಿನಾಂಕ:01.07.2018ರಲ್ಲಿ ಅರಣ್ಯ ಇಲಾಖೆಗೆ ವಹಿಸಿಕೊಡಲಾಗಿತ್ತು. ನಂತರ ದಿನಾಂಕ:19.02.2020ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅಗರ ಕೆರೆಯನ್ನು ವಹಿಸಿಕೊಡಲಾಗಿದೆ.
ಇ)	ನಿರ್ವಹಣೆಯ ಗುತ್ತಿಗೆ ವಹಿಸಿದ ಖಾಸಗಿ ಸಂಸ್ಥೆಯವರು ಈ ಕೆರೆಯ ಅಗಳದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಕೈಗೊಳ್ಳುವ ಸಂಬಂಧ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿರುತ್ತಾರೆಯೇ; ವಾಣಿಜ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಅಗರಕೆರೆಯಲ್ಲಿ ಅವಕಾಶವಿದೆ ಎಂಬುದಾಗಿ ಸಾರ್ವಜನಿಕರಿಗೆ ಮಾಹಿತಿ ನೀಡಿ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆಯೇ; ಕೆರೆಗಳ ನಿರ್ವಹಣೆ ಎಂದರೆ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಎಂದು ಕೆರೆಯ ನಿರ್ವಹಣೆಗಾಗಿ ಖಾಸಗಿ ಸಂಸ್ಥೆಯವರಿಗೆ ಕೆರೆಗಳನ್ನು ವಹಿಸಿಕೊಡುವಾಗ ಲಿಖಿತವಾಗಿ ಆದೇಶ ನೀಡಲಾಗಿದೆಯೇ;	ಹೌದು. 2007ರಲ್ಲಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಟೆಂಡರ್‌ನ್ನು ಕರೆದಿರುತ್ತಾರೆ. ಯಶಸ್ವಿ ಬಿಡ್ಡುದಾರರಾದ ಖಾಸಗಿ ಸಂಸ್ಥೆಯವರಿಗೆ ಕೆರೆಯ ನಿರ್ವಹಣೆ ಕಾಮಗಾರಿಗಾಗಿ ಲಿಖಿತವಾಗಿ ಆದೇಶ ನೀಡಲಾಗಿದೆ.

ಈ)	ಕೆರೆಯ ಅಂಗಳದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸಲು ನಿಯಮದಲ್ಲಿ ಅವಕಾಶವಿದೆಯೇ; ಅಮ್ಯೂಸ್‌ಮೆಂಟ್ ಪಾರ್ಕ್ ಅಥವಾ ಯಾವುದೇ ವಾಣಿಜ್ಯ ಚಟುವಟಿಕೆಗಳನ್ನು ಕೆರೆಯ ಅಂಗಳದಲ್ಲಿ ನಿರ್ಮಿಸುವುದರಿಂದ ಕೆರೆಯ ನೈಸರ್ಗಿಕ ಪರಿಸರಕ್ಕೆ ಹಾನಿಯುಂಟಾಗುವುದು ಸರ್ಕಾರದ ಗಮನದಲ್ಲಿದೆಯೇ; ಈ ಕುರಿತು ಸರ್ಕಾರದ ನಿಲುವೇನು?	ಕೆರೆಯ ಅಂಗಳದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸಲು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ-2014 ಹಾಗೂ ತಿದ್ದುಪಡಿ 2018ರ ಸೆಕ್ಷನ್12(3)ರಂತೆ ಕೆರೆ ಅಂಗಳದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸಲು ಅವಕಾಶವಿರುವುದಿಲ್ಲ.

ಸಂಖ್ಯೆ: ಅಪಜೀ 36 ಎಫ್‌ಟಿಎಸ್ 2020

21/03/2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು